**<u>ಮಾನ್ಯ 1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನಾಗಮಂಗಲ.</u>**

**<u>ಉಪಸ್ಥಿತರು</u>**

**ಶ್ರೀ ಕೆ.ಪಿ. ಸಿದ್ದಪ್ಪಾಜಿ. ಬಿ.ಎ,. ಎಲ್.ಎಲ್.ಬಿ.**
**ಮಾನ್ಯ 1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.**
**ನಾಗಮಂಗಲ.**

**<u>ದಿನಾಂಕ 9 ನೇ ಏಪ್ರಿಲ್ 2025</u>**

**<u>ಅಸಲು ದಾವಾ ಸಂಖ್ಯೆ: 254/2022</u>**

ವಾದಿ : ಎನ್. ಕೃಷ್ಣಮೂರ್ತಿ

-: ವಿರುದ್ಧ :-

ಪ್ರತಿವಾದಿಗಳು : ಕೃಷ್ಣೇಗೌಡ ಹಾಗೂ ಇತರರು

**<u>1 ನೇ ಮಧ್ಯಂತರ ಅರ್ಜಿಯ ಪಕ್ಷಗಾರರ ಸ್ಥಾನಮಾನ</u>**

ಅರ್ಜಿದಾರರು/ ವಾದಿ : ಎನ್. ಕೃಷ್ಣಮೂರ್ತಿ

(ಪ್ರತಿನಿಧಿಸುವವರುಃ ಶ್ರೀಮತಿ ಆರ್.ಬಿ., ವಕೀಲರು)

-: ವಿರುದ್ಧ :-

ಎದುರುದಾರರು/ ಪ್ರತಿವಾದಿಗಳು : ಕೃಷ್ಣೇಗೌಡ ಹಾಗೂ ಇತರರು

(ಪ್ರತಿನಿಧಿಸುವವರುಃ ಶ್ರೀ ಡಿ.ಆರ್.ಎಂ, ವಕೀಲರು)

| | | |
|---|---|---|
| i | ಕಾಯ್ದೆ | ದಂಡ ಪ್ರಕ್ರಿಯಾ ಸಂಹಿತೆ ಕ್ರಮಾದೇಶ39 ನಿಯಮ 1 ಮತ್ತು 2 |
| ii | ಪರಿಹಾರ | ತಾತ್ಕಲಿಕ ತಡಯಾಜ್ಞೆ |
| iii | ಅರ್ಜಿ ಸಲ್ಲಿಸಿದ ದಿನಾಂಕ | 30-07-2022 |
| iv | ಅರ್ಜಿ ಸಂಖ್ಯೆ | I |
| v | ತಕರಾರು ಸಲ್ಲಿಸಿದ ದಿನಾಂಕ | 22-11-2024 |
| vi | ಆದೇಶ ಘೋಷಿಸಿದ ದಿನಾಂಕ | 09-04-2026 |

**1 ನೇ ಮಧ್ಯಂತರ ಅರ್ಜಿಯ ಮೇಲಿನ ಆದೇಶ**

ವಾದಿಯು ಪ್ರಸ್ತುತ 1 ನೇ ಮಧ್ಯಂತರ ಅರ್ಜಿಯನ್ನು ದಿವಾನಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ಸಹವಾಚಕ 151 ರ ಅಡಿಯಲ್ಲಿ ಸಲ್ಲಿಸಿ, ದಾವೆಯು ಸಂಪೂರ್ಣವಾಗಿ ಇತ್ಯರ್ಥಗೊಳ್ಳವವರೆಗೆ ಪ್ರತಿವಾದಿಗಳು, ಅವರ ಏಜೆಂಟ್, ಅವರ ಸೇವಕರು ಅಥವಾ ಅವರ ಪರವಾಗಿ ನಡೆದುಕೊಳ್ಳುವ ಯಾವನೆ ವ್ಯಕ್ತಿಯ ವಿರುದ್ಧ ವಾದಿಯ ದಾವಾ ಅನುಸೂಚಿ ಸ್ವತ್ತಿನ ಸ್ವಾಧೀನಾನುಭವಕ್ಕೆ ಅಡ್ಡಿ ಮಾಡದಂತೆ ತಾತ್ಕಾಲಿಕ ತಡೆಯಾಜ್ಞೆಯ ಆದೇಶವನ್ನು ಹೊರಡಿಸಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

2. ವಾದಿಯು ಪ್ರಸ್ತುತ ಮಧ್ಯಂತರ ಅರ್ಜಿಯ ಸಮರ್ಥನೆಗಾಗಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ವಾದಿಗಳು ಹೇಳುವುದೇನೆಂದರೆ, ವಾದಿಯು ದಾವಾ ಅನುಸೂಚಿ ಸ್ವತ್ತಿಗೆ ಸಂಪೂರ್ಣ ಮಾಲೀಕರಾಗಿ ಸ್ವಾಧೀನಾನುಭವದಲ್ಲಿರುತ್ತಾರೆ. ವಾದಿಯು ದಾವಾ ಆಸ್ತಿಯನ್ನು ದಿನಾಂಕ 23-04-2007 ರ ನೊಂದಾಯಿತ ಕ್ರಯ ಪತ್ರದ ಮುಖಾಂತರ ಶಂಭೇಗೌಡ ಬಿನ್ ಲೇಟ್ ಚನ್ನೆಗೌಡ ರವರಿಂದ ಕ್ರಯಕ್ಕೆ ಪಡೆದಿರುತ್ತಾರೆ ಪ್ರತಿವಾದಿಗಳಿಗೆ ದಾವಾ ಆಸ್ತಿಯ ಮೇಲೆ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ ಮತ್ತು ಸ್ವಾಧೀನಾನುಭವದಲ್ಲಿ ಇಲ್ಲದಿದ್ದರು ಸಹ ವಾದಿಯ ಸ್ವಾಧೀನಾನುಭವಕ್ಕೆ ತೊಂದರೆ ನೀಡುತ್ತಿರುತ್ತಾರೆ. ಆದ್ದರಿಂದ ವಾದಿಯು ಈ ದಾವೆಯನ್ನು ಸಲ್ಲಿಸಿರುತ್ತಾರೆ. ವಾದಿಯ ಪರವಾಗಿ ಮೊದಲ ನೋಟಕ್ಕೆ ಸಮ್ಮತವಾದ ಮೊಕದ್ದಮೆ ಮತ್ತು ಅನುಕೂಲತೆಯ ಒಲವನ್ನು ಹೊಂದಿದ್ದು, ತಾತ್ಕಾಲಿಕ ತಡೆಯಾಜ್ಞೆಯನ್ನು ವಾದಿಯ ಪರವಾಗಿ ನೀಡದಿದ್ದಲ್ಲಿ ವಾದಿಗೆ ತುಂಬ ಲಾರದ ನಷ್ಟ ಮತ್ತು ಹಾನಿಯು ಸಂಭವಿಸುತ್ತದೆ. ಆದ್ದರಿಂದ, ಪ್ರಸ್ತುತ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಿ ಆದೇಶ ಮಾಡಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

3. ದಾವಾ ಸಮನ್ಸ್ ಜಾರಿಯಾದ ನಂತರ ಪ್ರತಿವಾದಿಗಳು ತಮ್ಮ ವಕೀಲರ ಮುಖಾಂತರ ನ್ಯಾಯಾಲಯಕ್ಕೆ ಹಾಜರಾಗಿ ಪ್ರಸ್ತುತ 1 ನೇ ಮಧ್ಯಂತರ ಅರ್ಜಿಗೆ ತಮ್ಮ ತಕರಾರನ್ನು ಸಲ್ಲಿಸಿರುತ್ತಾರೆ.

ಪ್ರತಿವಾದಿಯು ತಮ್ಮ ತಕರಾರಿನಲ್ಲಿ ವಾದಿಯು ದಾವಾ ಆಸ್ತಿಯನ್ನು ದಿನಾಂಕ 23-04-2007 ರ ನೊಂದಾಯಿತ ಕ್ರಯ ಪತ್ರದ ಮುಖಾಂತರ ಕ್ರಯಕ್ಕೆ ಪಡೆದಿರುತ್ತಾರೆ ಎಂಬುದನ್ನು ಒಪ್ಪಿಕೊಂಡಿರುತ್ತಾರೆ. ಪ್ರತಿವಾದಿಗಳ ನಿಲುವು ಏನೆಂದರೆ ದಾವಾ ಆಸ್ತಿಯು ಮೂಲತಃ ಗೋಮಾಳ ಜಮೀನು ಆಗಿದ್ದು, ದಾವಾ ಆಸ್ತಿಯು ಇನ್ನು ದುರಸ್ತಿ ಆಗಿರುವುದಿಲ್ಲ. ದಾವಾ ಸರ್ವೆ ನಂಬರ್ 54 ರಲ್ಲಿ ಸುಮಾರು 96 ಎಕರೆ ಜಮೀನನ್ನು ಇದ್ದು ಹಲವಾರು ಜನರಿಗೆ ಜಮೀನು ಮಂಜೂರಾಗಿದ್ದು ಸ್ವಾಧೀನಾನುಭವದಲ್ಲಿರುತ್ತಾರೆ. ಹೀಗಿರುವಾಗ ವಾದಿಯು ದಾವಾ ಆಸ್ತಿಯನ್ನು ಕ್ರಯಕ್ಕೆ ಪಡೆದ ನಂತರ ಸರ್ವೆ ನಂಬರ್ 54 ರಲ್ಲಿ ಪ್ರತಿವಾದಿಯನ್ನು ಒಳಗೊಂಡಂತೆ ಇತರರು ಸ್ವಾಧೀನಾನುಭವದಲ್ಲಿರುವ ಜಮೀನಿಗೆ ತಿರುಗಾಡಲು ಮತ್ತು ವ್ಯವಸಾಯ ಮಾಡಲು ತೊಂದರೆಯನ್ನು ನೀಡಿರುತ್ತಾರೆ. ಈ ಸಂಬಂಧ ಬಸವೇಶ್ವರ ನಗರ, ಸಂಕನಹಳ್ಳಿ ಮತ್ತು ಬಂಕಾಪುರ ಗ್ರಾಮಸ್ಥರು ಸಂಬಂಧಪಟ್ಟ ತಹಶೀಲ್ದಾರ್, ಉಪವಿಭಾಗಧಿಕಾರಿಗಳು, ಜಿಲ್ಲಾಧಿಕಾರಿಗಳು ಹಾಗು ಕಾವೇರಿ ನೀರಾವರಿ ನಿಗಮಕ್ಕೆ ಅರ್ಜಿಗಳನ್ನು ಸಲ್ಲಿಸಿದ್ದು, ಕಾವೇರಿ ನೀರಾವರಿ ನಿಗಮದ ಸಹಾಯಕ ಕಾರ್ಯ ಪಾಲಕ ಇಂಜಿನಿಯರ್ ರವರು ರಸ್ತೆಗೆ ಅಡ್ಡಲಾಗಿ ಅಡ್ಡಿಪಡಿಸಿರುವ ಬಗ್ಗೆ ವಾದಿ ಮತ್ತು ಇತರರ ವಿರುದ್ಧ ಕಾನೂನು ಕ್ರಮ ಕೈಗೊಂಡಿರುತ್ತಾರೆ ಸಾರ್ವಜನಿಕ ದಾರಿಗೆ ಅಡ್ಡಿ ಪಡಿಸುವ ವಿಚಾರವಾಗಿ ಬಸವೇಶ್ವರ ನಗರ, ಸಂಕನಹಳ್ಳಿ ಮತ್ತು ಬಂಕಾಪುರ ಗ್ರಾಮಸ್ಥರು ಮಾನ್ಯ ಸದಸ್ಯ ಕಾರ್ಯದರ್ಶಿಗಳು ತಾಲ್ಲೂಕು ಕಾನೂನು ಸೇವಾ ಸಮೀತಿ ನಾಗಮಂಗಲರವರಿಗೆ ದಿನಾಂಕ 09-06-2022 ರಂದು ವಾದಿಯ ವಿರುದ್ಧ ದಿನಾಂಕ 09-06-2022 ರಂದು ಅರ್ಜಿ ಸಲ್ಲಿಸಿದ್ದು, ಮಾನ್ಯ ಸದಸ್ಯ ಕಾರ್ಯದರ್ಶಿಗಳು ತಾಲ್ಲೂಕು ಕಾನೂನು ಸೇವಾ ಸಮೀತಿ ನಾಗಮಂಗಲರವರ ನಿರ್ದೇಶನ ಮೇರೆಗೆ ತಹಶೀಲ್ದಾರವರು ರಸ್ತೆಯ ಅಡ್ಡಿಯನ್ನು ತೆರವುಗೊಳಿಸುವಂತೆ ರಾಜಸ್ವ ನೀರಿಕ್ಷಕರಿಗೆ ಆದೇಶಸಿದ್ದು ರಾಜಸ್ವ ನೀರಿಕ್ಷಕರು ಸ್ಥಳಕ್ಕೆ ಬೇಟಿ ನೀಟಿ ವಾದಿಯು ಅಕ್ರಮವಾಗಿ ಸಾರ್ವಜನಿಕರಿಗೆ ತೊಂದರೆ ನೀಡುತ್ತಿರುವ ಸ್ಥಳವನ್ನು ಪರಿಶೀಲನೆ ಮಾಡಿ ವಾದಿಯು ಅಕ್ರಮವಾಗಿ ಕಟ್ಟಿದ್ದ ಕಾಲುವೆಯನ್ನು ತೆರವುಗೊಳಿಸಿ ಸಾರ್ವಜನಿಕರು ಓಡಾಡಲು ಅನುಕೂಲ ಮಾಡಿಕೊಟ್ಟಿರುತ್ತಾರೆ. ಸದರಿರವರ ವರದಿಯಂತೆ ಮಾನ್ಯ ಸದಸ್ಯ ಕಾರ್ಯದರ್ಶಿಗಳು

ತಾಲ್ಲೂಕು ಕಾನೂನು ಸೇವಾ ಸಮೀತಿ ನಾಗಮಂಗಲರವರು ಗ್ರಾಮಸ್ಥರು ನೀಡಿದ್ದ ಅರ್ಜಿಯನ್ನು ಮುಕ್ತಾಯಗೊಳಿಸಿರುತ್ತಾರೆ.

4. ಗ್ರಾಮಸ್ಥರು ಮಾನ್ಯ ಸದಸ್ಯ ಕಾರ್ಯದರ್ಶಿಗಳು ತಾಲ್ಲೂಕು ಕಾನೂನು ಸೇವಾ ಸಮೀತಿ ನಾಗಮಂಗಲಕ್ಕೆ ಅರ್ಜಿಯನ್ನು ನೀಡಿ ವಾದಿಯ ತೊಂದರೆಯಿಂದ ಮುಕ್ತರಾದ ನಂತರ ವಾದಿಯು ಪ್ರತಿವಾದಿಗಳಿಗು ತೊಂದರೆ ಕೊಡುವ ಸಲುವಾಗಿ ಈ ಮೇಲಿನ ಸಂಗತಿಗಳನ್ನು ಮರೆಮಾಚ ಈ ಸುಳ್ಳು ದಾವೆಯನ್ನು ತಂದಿರುತ್ತಾರೆ. ವಾದಿಯು ನ್ಯಾಯಾಲಯಕ್ಕೆ ಶುದ್ಧ ಹಸ್ತದಿಂದ ಬಂದಿರುವುದಿಲ್ಲ. ಆದ್ದರಿಂದ ವಾದಿಗಳು ಸಲ್ಲಿಸಿರುವ ಪ್ರಸ್ತುತ 1 ನೇ ಮಧ್ಯಂತರ ಅರ್ಜಿಯನ್ನು ವಜಾಗೊಳಿಸಿ ಆದೇಶ ಮಾಡಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

5. ಉಭಯ ಪಕ್ಷಗಾರರ ಪರ ಹಾಜರಾಗುವ ವಕೀಲರ ವಾದವನ್ನು ಆಲಿಸಲಾಯಿತು ಮತ್ತು ಈ ದಾವೆಗೆ ಸಂಬಂಧಿಸಿದ ನ್ಯಾಯಾಲಯದ ಸಮ್ಮುಖದಲ್ಲಿರುವ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಯಿತು.

6. ಈ ನ್ಯಾಯಾಲಯದ ಪರಿಗಣನೆಗೆ ಈ ಕೆಳಕಂಡ ಅಂಶಗಳು ಉದ್ಭವವಾಗಿರುತ್ತವೆ.

<u>ಅಂಶಗಳು</u>

1. ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಪಡೆಯಲು ವಾದಿಯು ಮೊದಲ ನೋಟಕ್ಕೆ ಸಮ್ಮತವಾದ ವಾದವನ್ನು ತೋರ್ಪಡಿಸಿದ್ದಾರೆಯೇ?

2. ಅನುಕೂಲತೆಯ ಒಲವು ವಾದಿಯ ಪರವಾಗಿದೆಯೇ?

3. 1 ನೇ ಮಧ್ಯಂತರ ಅರ್ಜಿಯನ್ನು ವಜಾಗೊಳಿಸುವುದರಿಂದ ವಾದಿಗೆ ತುಂಬಲಾರದ ನಷ್ಟ ಮತ್ತು ಸರಿಪಡಿಸಲಾಗದ ಕ್ಷತಿಯುಂಟಾಗುತ್ತದೆಯೇ?

4. ಏನು ಆದೇಶ?

7. ಈ ನ್ಯಾಯಾಲಯವು ಈ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸುತ್ತದೆ.

| | | |
|---|---|---|
| ಅಂಶ ಸಂಖ್ಯೆ 1 | : | ನಕರಾತ್ಮಕವಾಗಿ. |
| ಅಂಶ ಸಂಖ್ಯೆ 2 | : | ನಕರಾತ್ಮಕವಾಗಿ. |
| ಅಂಶ ಸಂಖ್ಯೆ 3 | : | ನಕರಾತ್ಮಕವಾಗಿ. |
| ಅಂಶ ಸಂಖ್ಯೆ 4 | : | ಈ ಕೆಳಕಂಡ ಕಾರಣಗಳಿಗಾಗಿ ಅಂತಿಮ ಆದೇಶದಂತೆ. |

<u>ಕಾರಣಗಳು</u>

8. <u>ಅಂಶ ಸಂಖ್ಯೆ **1** ರಿಂದ **3 :-**</u> ಅಂಶ ಸಂಖ್ಯೆ 1 ರ ಮೇಲಿನ ಚರ್ಚೆಯು ಉಳಿದ ಅಂಶಗಳಲ್ಲಿ ಪುನರಾವರ್ತನೆಯಾಗುವುದರಿಂದ ಎಲ್ಲಾ ಅಂಶಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

9. ವಾದಿಗಳು ಪ್ರಸ್ತುತ ದಾವೆಯನ್ನು ಪ್ರತಿವಾದಿಗಳ ವಿರುದ್ಧ ದಾವಾ ಅನುಸೂಚಿ ಆಸ್ತಿಗೆ ಸಂಬಂಧಿಸಿದಂತೆ ಶಾಶ್ವತ ನಿರ್ಬಂಧಕಾಜ್ಞೆಯ ಪರಿಹಾರವನ್ನು ಕೋರಿ ಸಲ್ಲಿಸಿರುತ್ತಾರೆ. ಈ ದಾವೆಯಲ್ಲಿ ವಾದಿಯು ದಾವಾ ಸ್ವತ್ತಿನಲ್ಲಿ ಮಾಲೀಕರಾಗಿ ಸ್ವಾಧೀನಾನುಭವದಲ್ಲಿ ಇರುವ ಬಗ್ಗೆ ಯಾವುದೇ ವಿವಾದ ಇರುವುದಿಲ್ಲ. ವಾದಿಯು ಹಾಜರು ಪಡಿಸಿಸಲು ದಿನಾಂಕ 18-04-2007 ರ ಕ್ರಯ ಪತ್ರದ ಪ್ರತಿಯನ್ನು ಪರಿಶೀಲಿಸಿದಾಗ ವಾದಿಯು ದಾವಾ ಆಸ್ತಿಯನ್ನು ನೋಂದಾಯಿತ ಕ್ರಯ ಪತ್ರದ ಮುಖಾಂತರ ಪಡೆದಿರುವುದು ಕಂಡು ಬರುತ್ತದೆ. ವಾದಿಯ ದಾವೆ ಏನೆಂದರೆ ಪ್ರತಿವಾದಿಗಳಿಗೆ ದಾವಾ ಆಸ್ತಿಯ ಮೇಲೆ ಯಾವುದೇ ರೀತಿಯ ಹಕ್ಕು ಹಿತಾಸಕ್ತಿ ಮತ್ತು ಸ್ವಾಧೀನಾನುಭವದಲ್ಲಿ ಇಲ್ಲದಿದ್ದರು ಸಹ ಪ್ರತಿವಾದಿಗಳು ವಾದಿಯ ಸ್ವಾಧೀನಾನುಭವಕ್ಕೆ ತೊಂದರೆಯನ್ನು ನೀಡುತ್ತಿರುತ್ತಾರೆ.

10. ಈ ದಾವೆಯಲ್ಲಿ ಪ್ರತಿವಾದಿಗಳ ನಿಲುವು ಏನೆಂದರೆ ದಾವಾ ಆಸ್ತಿಯು ಮೂಲತಃ ಗೊಮಾಳ ಜಮೀನು ಆಗಿದ್ದು, ದಾವಾ ಆಸ್ತಿಯು ಇನ್ನು ದುರಸ್ತಿ ಆಗಿರುವುದಿಲ್ಲ. ದಾವಾ ಸರ್ವೆ ನಂಬರ್ 54 ಸುಮಾರು 96 ಎಕರೆ ಜಮೀನನ್ನು ಹೊಂದಿದ್ದು ಹಲವಾರು ಜನರಿಗೆ ಜಮೀನು ಮಂಜೂರಾಗಿದ್ದು, ಸ್ವಾಧೀನಾನುಭವದಲ್ಲಿರುತ್ತಾರೆ. ಹೀಗಿರುವಾಗ ವಾದಿಯು ದಾವಾ ಆಸ್ತಿಯನ್ನು ಕ್ರಯಕ್ಕೆ ಪಡೆದ ನಂತರ

ಸರ್ವೆ ನಂಬರ್ 54 ರಲ್ಲಿ ಪ್ರತಿವಾದಿಯನ್ನು ಒಳಗೊಂಡಂತೆ ಇತರರು ಸ್ವಾಧೀನಾನುಭವದಲ್ಲಿರುವ ಜಮೀನಿಗೆ ತಿರುಗಾಡಲು ಮತ್ತು ವ್ಯವಸಾಯ ಮಾಡಲು ತೊಂದರೆಯನ್ನು ನೀಡಿರುತ್ತಾರೆ. ಈ ಸಂಬಂಧ ಬಸವೇಶ್ವರ ನಗರ, ಸಂಕನಹಳ್ಳಿ ಮತ್ತು ಬಂಕಾಪುರ ಗ್ರಾಮಸ್ಥರು ಸಂಬಂಧಪಟ್ಟ ತಹಶೀಲ್ದಾರ್, ಉಪವಿಭಾಗಧಿಕಾರಿಗಳು, ಜಿಲ್ಲಾಧಿಕಾರಿಗಳು ಹಾಗು ಕಾವೇರಿ ನೀರಾವರಿ ನಿಗಮಕ್ಕೆ ಅರ್ಜಿಗಳನ್ನು ಸಲ್ಲಿಸಿದ್ದು ಕಾವೇರಿ ನೀರಾವರಿ ನಿಗಮದ ಸಹಾಯಕ ಕಾರ್ಯ ಪಾಲಕ ಇಂಜಿನಿಯರ್ ರವರು ರಸ್ತೆಗೆ ಅಡ್ಡಲಾಗಿ ಅಡ್ಡಿಪಡಿಸಿರುವ ಬಗ್ಗೆ ವಾದಿ ಮತ್ತು ಇತರರ ವಿರುದ್ಧ ಕಾನೂನು ಕ್ರಮ ಕೈಗೊಂಡಿರುತ್ತಾರೆ. ಸಾರ್ವಜನಿಕ ದಾರಿಗೆ ಅಡ್ಡಿ ಪಡಿಸುವ ವಿಚಾರವಾಗಿ ಬಸವೇಶ್ವರ ನಗರ, ಸಂಕನಹಳ್ಳಿ ಮತ್ತು ಬಂಕಾಪುರ ಗ್ರಾಮಸ್ಥರು ಮಾನ್ಯ ಸದಸ್ಯ ಕಾರ್ಯದರ್ಶಿಗಳು ತಾಲ್ಲೂಕು ಕಾನೂನು ಸೇವಾ ಸಮಿತಿ ನಾಗಮಂಗಲರವರಿಗೆ ದಿನಾಂಕ 09-06-2022 ರಂದು ವಾದಿಯ ವಿರುದ್ದ ದಿನಾಂಕ 09-06-2022 ರಂದು ಅರ್ಜಿ ಸಲ್ಲಿಸಿದ್ದು, ಮಾನ್ಯ ಸದಸ್ಯ ಕಾರ್ಯದರ್ಶಿಗಳು ತಾಲ್ಲೂಕು ಕಾನೂನು ಸೇವಾ ಸಮಿತಿ ನಾಗಮಂಗಲರವರ ನಿರ್ದೇಶನ ಮೇರೆಗೆ ತಹಶೀಲ್ದಾರವರು ರಸ್ತೆಯ ಅಡ್ಡಿಯನ್ನು ತೆರವುಗೊಳಿಸುವಂತೆ ರಾಜಸ್ವ ನೀರಿಕ್ಷಕರಿಗೆ ಆದೇಶಸಿದ್ದು ರಾಜಸ್ವ ನೀರಿಕ್ಷಕರು ಸ್ಥಳಕ್ಕೆ ಬೇಟಿ ನೀಟಿ ವಾದಿಯು ಅಕ್ರಮವಾಗಿ ಸಾರ್ವಜನಿಕರಿಗೆ ತೊಂದರೆ ನೀಡುತ್ತಿರುವ ಸ್ಥಳವನ್ನು ಪರಿಶೀಲನೆ ಮಾಡಿ ವಾದಿಯು ಅಕ್ರಮವಾಗಿ ಕಟ್ಟಿದ್ದ ಕಾಲುವೇಯನ್ನು ತೆರವುಗೊಳಿಸಿ ಸಾರ್ವಜನಿಕರು ಓಡಾಡಲು ಅನುಕೂಲ ಮಾಡಿಕೊಟ್ಟಿರುತ್ತಾರೆ. ಸದರಿರವರ ವರದಿಯಂತೆ ಮಾನ್ಯ ಸದಸ್ಯ ಕಾರ್ಯದರ್ಶಿಗಳು ತಾಲ್ಲೂಕು ಕಾನೂನು ಸೇವಾ ಸಮಿತಿ ನಾಗಮಂಗಲರವರು ಗ್ರಾಮಸ್ಥರು ನೀಡಿದ್ದ ಅರ್ಜಿಯನ್ನು ಮುಕ್ತಾಯಗೊಳಿಸಿರುತ್ತಾರೆ.

11. ಗ್ರಾಮಸ್ಥರು ಮಾನ್ಯ ಸದಸ್ಯ ಕಾರ್ಯದರ್ಶಿಗಳು ತಾಲ್ಲೂಕು ಕಾನೂನು ಸೇವಾ ಸಮಿತಿ ನಾಗಮಂಗಲಕ್ಕೆ ಅರ್ಜಿಯನ್ನು ನೀಡಿ ವಾದಿಯ ತೊಂದರೆಯಿಂದ ಮುಕ್ತರಾದ ನಂತರ ವಾದಿಯು ಪ್ರತಿವಾದಿಗಳಿಗು ತೊಂದರೆ ಕೊಡುವ ಸಲುವಾಗಿ ಈ ಮೇಲಿನ ಸಂಗತಿಗಳನ್ನು ಮರೆಮಾಚಿ ಈ ಸುಳ್ಳು ದಾವೆಯನ್ನು ತಂದಿರುತ್ತಾರೆ. ವಾದಿಯು ನ್ಯಾಯಾಲಯಕ್ಕೆ ಶುದ್ಧ ಹಸ್ತದಿಂದ ಬಂದಿರುವುದಿಲ್ಲ. ಸದರಿ

ಸಂಗತಿಗೆ ಪೂರಕವಾಗಿ ಪ್ರತಿವಾದಿಗಳು ಮಾನ್ಯ ಸದಸ್ಯ ಕಾರ್ಯದರ್ಶಿಗಳು ತಾಲ್ಲೂಕು ಕಾನೂನು ಸೇವಾ ಸಮಿತಿರವರಿಗೆ ಸಾರ್ವಜನಿಕರು ನೀಡಿರುವ ಅರ್ಜಿ, ತಾಲ್ಲೂಕು ಕಾನೂನು ಸೇವಾ ಸಮಿತಿಯಿಂದ ತಹಶೀಲ್ದಾರವರಿಗೆ ಕಳುಹಿಸಿರುವ ನೋಟಿಸು, ತಾಲ್ಲೂಕು ಕಾನೂನು ಸೇವಾ ಸಮಿತಿಯ ಆದೇಶ ಪುಟ, ತಹಶೀಲ್ದಾರವರು ಸದಸ್ಯ ಕಾರ್ಯದರ್ಶಿಗಳಿಗೆ ಕಳುಹಿಸಿರುವ ವರದಿ, ಆರ್.ಐ. ರವರ ವರದಿ, ತಹಶೀಲ್ದಾರವರು ನಿರ್ಮಿಸಿರುವ ರಸ್ತೆಯ ಪೊಟೋಗಳು, ಗ್ರಾಮಸ್ಥರು ಸಮಕ್ಷಮ ನಡೆಸಿರುವ ಆರ್. ಐ. ರವರ ವರದಿ, ಪಿ.ಡಬ್ಲ್ಯೂ ಡಿ. ಇಂಜಿನಿಯರಗೆ ನೀಡಿರುವ ಅರ್ಜಿ ಮತ್ತು ಪಿ.ಡಬ್ಲ್ಯೂ ಡಿ. ಇಂಜಿನಿಯರಗೆ ನೀಡಿರುವ ನೋಟಿಸ್ ಗಳನ್ನು ಹಾಜರು ಪಡಿಸಿರುತ್ತಾರೆ. ಸದರಿ ದಾಖಲೆಗಳನ್ನು ಪರಿಶೀಲಿಸಿದಾಗ ಬಸವೇಶ್ವರ ನಗರ, ಸಂಕನಹಳ್ಳಿ ಮತ್ತು ಬಂಕಾಪುರ ಗ್ರಾಮಸ್ಥರು ಸಾರ್ವಜನಿಕ ದಾರಿಗೆ ವಾದಿಯು ಅಡ್ಡಿ ಪಡಿಸುವ ವಿಚಾರವಾಗಿ ಮಾನ್ಯ ಸದಸ್ಯ ಕಾರ್ಯದರ್ಶಿಗಳು ತಾಲ್ಲೂಕು ಕಾನೂನು ಸೇವಾ ಸಮೀತಿ ನಾಗಮಂಗಲರವರಿಗೆ ದಿನಾಂಕ 09-06-2022 ರಂದು ವಾದಿಯ ವಿರುದ್ದ ದಿನಾಂಕ 09-06-2022 ರಂದು ಅರ್ಜಿ ಸಲ್ಲಿಸಿದ್ದು, ಮಾನ್ಯ ಸದಸ್ಯ ಕಾರ್ಯದರ್ಶಿಗಳು ತಾಲ್ಲೂಕು ಕಾನೂನು ಸೇವಾ ಸಮೀತಿ ನಾಗಮಂಗಲರವರ ನಿರ್ದೇಶನ ಮೇರೆಗೆ ತಹಶೀಲ್ದಾರವರು ರಸ್ತೆಯ ಅಡ್ಡಿಯನ್ನು ತೆರವುಗೊಳಿಸುವಂತೆ ರಾಜಸ್ವ ನೀರಿಕ್ಷರಿಗೆ ಆದೇಶಸಿದ್ದು ರಾಜಸ್ವ ನೀರಿಕ್ಷಕರು ಸ್ಥಳಕ್ಕೆ ಬೇಟಿ ನೀಟಿ ವಾದಿಯು ಅಕ್ರಮವಾಗಿ ಸಾರ್ವಜನಿಕರಿಗೆ ತೊಂದರೆ ನೀಡುತ್ತಿರುವ ಸ್ಥಳವನ್ನು ಪರಿಶೀಲನೆ ಮಾಡಿ ವಾದಿಯು ಅಕ್ರಮವಾಗಿ ಕಟ್ಟಿದ್ದ ಕಾಲುವೆಯನ್ನು ತೆರವುಗೊಳಿಸಿ ಸಾರ್ವಜನಿಕರು ಓಡಾಡಲು ಅನುಕೂಲ ಮಾಡಿಕೊಟ್ಟಿರುತ್ತಾರೆ. ಸದರಿರವರ ವರದಿಯಂತೆ ಮಾನ್ಯ ಸದಸ್ಯ ಕಾರ್ಯದರ್ಶಿಗಳು ತಾಲ್ಲೂಕು ಕಾನೂನು ಸೇವಾ ಸಮೀತಿ ನಾಗಮಂಗಲರವರು ಗ್ರಾಮಸ್ಥರು ನೀಡಿದ್ದ ಅರ್ಜಿಯನ್ನು ಮುಕ್ತಾಯಗೊಳಿಸಿರುವುದು ಕಂಡು ಬರುತ್ತದೆ.

12. ವಾದಿಯು ಪ್ರಸ್ತುತ ದಾವೆಯನ್ನು ಸಲ್ಲಿಸುವಾಗ ತಮ್ಮ ವಾದ ಪತ್ರದಲ್ಲಿ ಆಗಲ್ಲಿ ಪ್ರಸ್ತುತ ಅರ್ಜಿಯ ಪ್ರಮಾಣ ಪತ್ರದಲ್ಲಾಗಲಿ ಈ ಮೇಲಿನ ಸಂಗತಿಯನ್ನು ತಿಳಿಸಿರುವುದಿಲ್ಲ ನ್ಯಾಯಾ ಸಮ್ಮತ ತಾತ್ಕಲಿಕ ತಡೆಯಾಜ್ಞೆಯನ್ನು ಪಡೆಯಲು ವಾದಿಯು ನ್ಯಾಯಾಲಯಕ್ಕೆ ಶುದ್ದ ಹಸ್ತದಿಂದ ಬರಬೇಕು ಆದರೆ

ವಾದಿಯು ನ್ಯಾಯಾಲಯಕ್ಕೆ ವಸ್ತು ಸಂಗತಿಗಳನ್ನು ಮರೆಮಾಚಿ ಈ ದಾವೆಯನ್ನು ತಂದಿರುತ್ತಾರೆ. ವಾದಿ ಮತ್ತು ಪ್ರತಿವಾದಿಗಳ ಪ್ರಕರಣವನ್ನು ಪರಿಗಣಿಸಿದಾಗ ಈ ಹಂತದಲ್ಲಿ ನ್ಯಾಯಾ ಸಮ್ಮತ ತಾತ್ಕಲಿಕ ತಡೆಯಾಜ್ಞೆಯನ್ನು ವಾದಿಯ ಪರವಾಗಿ ನೀಡಿದಲ್ಲಿ ವಾದಿಗಿಂತ ಪ್ರತಿವಾದಿಗಳಿಗೆ ಹೆಚ್ಚು ಹಾನಿ, ನಷ್ಟ ಮತ್ತು ಕೇಡು ಸಂಭವಿಸುತ್ತದೆ. ವಾದಿಯು ನ್ಯಾಯಸಮ್ಮತ ತಾತ್ಕಲಿಕ ತಡೆಯಾಜ್ಞೆಯನ್ನು ಪಡೆಯಲು ವಾದಿಯು ತಮ್ಮ ಪರವಾಗಿ ಮೊದಲ ನೋಟಕ್ಕೆ ಸಮ್ಮತವಾದ ಮೊಕದ್ದಮೆಯನ್ನು ಹೊಂದಿರುವುದಿಲ್ಲ ಎಂದು ಈ ನ್ಯಾಯಾಲಯವು ಅಭಿಪ್ರಾಯಕ್ಕೆ ಬಂದಿದ್ದ, ಅನುಕೂಲತೆಯ ಒಲವು ಪ್ರತಿವಾದಿಗಳ ಪರವಾಗಿ ಇದ್ದು, ಅರ್ಜಿಯನ್ನು ಪುರಸ್ಕರಿಸಿದ್ದಲ್ಲಿ ವಾದಿಗಿಂತ ಪ್ರತಿವಾದಿಗಳಿಗೆ ಹೆಚ್ಚು ಹಾನಿ ಮತ್ತು ನಷ್ಟ ಉಂಟಾಗುತ್ತದೆ. ಆದ್ದರಿಂದ ಈ ನ್ಯಾಯಾಲಯವು ಅಂಶ ಸಂಖ್ಯೆ **1** ರಿಂದ **3** ನ್ನು ನಕರಾತ್ಮಕವಾಗಿ ಉತ್ತರಿಸಿರುತ್ತದೆ.

13. <u>ಅಂಶ ಸಂಖ್ಯೆ **4:-**</u> ಮೇಲ್ಕಂಡ ಕಾರಣಗಳಿಗೆ ಈ ಕೆಳಕಂಡಂತೆ ಅಂತಿಮ ಆದೇಶ.

<u>ಆದೇಶ</u>

ದಿವಾಣಿ ಪ್ರಕ್ರಿಯ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ರ ಅಡಿಯಲ್ಲಿ ವಾದಿಯು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ 1 ನ್ನು ವಜಾಗೊಳಿಸಲಾಗಿದೆ.

*(ಈ ಆದೇಶವನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದ ಮೂಲಕ ಉಕ್ತಲೇಖನ ಕೊಟ್ಟು, ಅವರು ಬೆರಳಚ್ಚು ಮಾಡಿದ ನಂತರ ಓದಿ, ತಪ್ಪುಗಳನ್ನು ತಿದ್ದಿ ಬಹಿರಂಗ ನ್ಯಾಯಾಲಯದಲ್ಲಿ ದಿನಾಂಕ 9 ನೇ ಏಪ್ರಿಲ್ 2026 ರಂದು ನಾನು ಉದ್ಘೋಷಿಸಿದ್ದೇನೆ)*

**(ಕೆ.ಪಿ. ಸಿದ್ದಪ್ಪಾಜಿ)**
1 ನೇ ಅಪರ ದಿವಾನಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ
ನ್ಯಾಯಿಕ ದಂಡಾಧಿಕಾರಿಗಳು ನಾಗಮಂಗಲ.